

# ಸ್ಟಾರ್‌ಡಮ್ ಕಳೆದುಕೊಳ್ಳುವ ಭಯ

ಒಂದರ ಹಿಂದೊಂದು ಸೋಲುಗಳು ಎದುರಾದರೆ ಎಂತಹ ನಟನೂ ತನ್ನ ವರ್ಚಸ್ಸು ಕಳೆದುಕೊಳ್ಳುವುದು ಸಹಜ. ತಾರಾಮೌಲ್ಯದ ಏರಿಳಿತ ಸಿನಿಮಾದ ಸೋಲು–ಗೆಲುವಿನ ಮೇಲೆ ಅವಲಂಬಿಸಿರುವುದು ದಿಟ. ಹೀಗೆ ಸ್ಟಾರ್‌ಡಮ್ ಕಳೆದುಕೊಳ್ಳುವ ಭೀತಿ ಅಜಯ್ ದೇವಗನ್‌ನನ್ನೂ ಕಾಡಿದೆಯಂತೆ. ಅಭಿಮಾನಿಗಳು ಆಗಾಗ್ಗೆ ಕಾಡುತ್ತಿದ್ದರೇನೇ ತಮ್ಮ 'ಸ್ಟಾರ್‌ಡಮ್' ಕುಸಿದಿಲ್ಲ ಎಂದು ಕಲಾವಿದರಿಗೆ ಭರವಸೆ ಮೂಡುವುದು. ಒಂದು ವೇಳೆ ಅಭಿಮಾನಿಗಳಿಂದ ಪ್ರೀತಿಯ ಹಾರೈಕೆ ಬರುವುದು ನಿಂತು ಹೋದರೆ ಅವರಲ್ಲಿ ಭಯ ಮೂಡಲು ಶುರುವಾಗುತ್ತದೆ. ಆ ಭಯ ಎಲ್ಲರಲ್ಲಿಯೂ ಇದ್ದೇ ಇರುತ್ತದೆ ಎನ್ನುವುದು ಅಜಯ್ ಅಭಿಪ್ರಾಯ.

ಅಭಿಮಾನಿಗಳಿಂದ ದೂರವೇ ಉಳಿದರೂ ಅವರನ್ನು ಕಳೆದುಕೊಳ್ಳುವ ಅಪಾಯವಿರುತ್ತದೆ ಎನ್ನುವುದು ಅಜಯ್ ಅನುಭವಕ್ಕೆ ಬಂದಿದೆ. ಹೀಗಾಗಿ ಅವರೊಂದಿಗೆ ಮುಕ್ತವಾಗಿ ಬೆರೆಯಲು ಆತ ಪ್ರಯತ್ನಿಸುತ್ತಿದ್ದಾನಂತೆ. ಇದೊಂದು ರೀತಿಯ ಬಲವಂತವಾಗಿ ತೆರೆದುಕೊಳ್ಳುವ ಪ್ರಯತ್ನ ಎನ್ನುತ್ತಾನೆ ಆತ. ಆದರೆ ಈಗಲೂ ಅಜಯ್ ಸ್ವಲ್ಪ ಜಿಗುಟು ಸ್ವಭಾವವನ್ನು ಉಳಿಸಿಕೊಂಡಿದ್ದಾನಂತೆ.

ಅಂದ ಹಾಗೆ, ಅಜಯ್‌ನ ಮಹತ್ವಾಕಾಂಕ್ಷೆಯ ಚಿತ್ರ 'ಶಿವಾಯ್'ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. 'ಏ ದಿಲ್ ಹೈ ಮುಷ್ಕಿಲ್' ಚಿತ್ರದೊಂದಿಗೆ ಪೈಪೋಟಿ ನಡೆಸುತ್ತಾ ದೀಪಾವಳಿ ದಿನದಂದು ಬಿಡುಗಡೆಯಾದ ಚಿತ್ರ, ಗಳಿಕೆಯ ಲೆಕ್ಕಾಚಾರದಲ್ಲಿ ಆ ಸಿನಿಮಾಕ್ಕಿಂತ ಹಿಂದೆ ಉಳಿದಿದ್ದರೂ, ಹೆಚ್ಚು ಪ್ರಶಂಸೆ ಪಡೆದುಕೊಂಡಿದೆ.